ಓಎಸ್ 7/2022

ಪಿಡಬ್ಲ್ಯೂ 2

**ಸಾಕ್ಷಿಯು ದಿಃ 09.12.2025 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: 1 ಮತ್ತು 2ನೇ ಪ್ರತಿವಾದಿಗಳ ಪರ ವಕೀಲರಿಂದ**

ವಾದಿಯ ತಂದೆ ಶಿವಬಸಪ್ಪ ರವರ ತಂದೆಯ ಹೆಸರು ಸೊತ್ತಮಾದಪ್ಪ ಆಗಿರುತ್ತದೆ. ಗ್ರಾಮದಲ್ಲಿ ಗ್ರಾಮದ ಪರವಾಗಿ ನನಗೆ ಕೆಲವೊಂದು ಜವಾಬ್ದಾರಿಗಳನ್ನು ವಹಿಸಿದ್ದಾರೆ ಎಂದರೆ ಸರಿ. ಸೊತ್ತಮಾದಪ್ಪ ರವರ ಹೆಸರು ಮಾದಪ್ಪ ಆಗಿದ್ದು, ಅವರಿಗೆ ಊನ ವಾಗಿದ್ದ ಕಾರಣ ಅವರನ್ನು ಸೊತ್ತಮಾದಪ್ಪ ಎಂದು ಕರೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು ಸೊತ್ತಮಾದಪ್ಪ ರವರನ್ನು ನೋಡಿರುವುದಿಲ್ಲ ಮತ್ತು ನಾನು ಹುಟ್ಟುವ ಮುಂಚೆ ಅವರು ತೀರಿಕೊಂಡಿದ್ದರು ಎಂದರೆ ಸರಿ. ಸೊತ್ತಮಾದಪ್ಪನ ತಂದೆಯ ಹೆಸರು ನನಗೆ ಗೊತ್ತಿಲ್ಲ. ಸೊತ್ತಮಾದಪ್ಪ ರವರು ಮೃತಪಟ್ಟು ಎಷ್ಟು ವರ್ಷಗಳಾಗಿವೆ ಎಂದು ನನಗೆ ಗೊತ್ತಿಲ್ಲ. 1 ಮತ್ತು 2ನೇ ಪ್ರತಿವಾದಿಗಳ ತಂದೆಯ ಹೆಸರು ಗುರುಮಲ್ಲಪ್ಪ ವಾಗಿರುತ್ತದೆ. ಗುರುಮಲ್ಲಪ್ಪನ ತಂದೆಯ ಹೆಸರು ಶಿವಪ್ಪ ಆಗಿರುತ್ತದೆ. ಗುರುಮಲ್ಲಪ್ಪ ರವರು ದೊಡ್ಡಹುಂಡಿ ಗ್ರಾಮದವರು. ಗುರುಮಲ್ಲಪ್ಪ ರವರ ತಂದೆ ಶಿವಪ್ಪ ರವರಿಗೂ ಮತ್ತು ಚಿಕ್ಕನಂಜಪ್ಪ ರವರಿಗೂ ಏನು ಸಂಬಂಧ ಎಂದು ನನಗೆ ಗೊತ್ತಿಲ್ಲ. ಚಿಕ್ಕನಂಜಪ್ಪ ರವರನ್ನು ನಾನು ನೋಡಿರುವುದಿಲ್ಲ. ಸದರಿ ಚಿಕ್ಕನಂಜಪ್ಪ ರವರು ಯಾವಾಗ ಮೃತಪಟ್ಟಿದ್ದಾರೆ ಎಂದು ನನಗೆ ಗೊತ್ತಿಲ್ಲ. ಶಿವಪ್ಪ ರವರನ್ನು ನೋಡಿದ್ದೇನೆ. ಚಿಕ್ಕನಂಜಪ್ಪ ರವರ ತಂದೆಯ ಹೆಸರು ನನಗೆ ಗೊತ್ತಿಲ್ಲ. ಚಿಕ್ಕನಂಜಪ್ಪ ರವರ ತಂದೆಗೆ ಎಷ್ಟು ಜನ ಮಕ್ಕಳು ಮತ್ತು ಅವರ ಹೆಸರು ನನಗೆ ಗೊತ್ತಿಲ್ಲ ಎಂದರೆ ಸರಿ.

2. ನನಗೆ ದೊಡ್ಡಹುಂಡಿ ಗ್ರಾಮದ ಸರ್ವೇ ನಂಬರ್ 112 ರಲ್ಲಿ 2 ಎಕರೆ 10 ಗುಂಟೆ ಜಮೀನು ಇರುತ್ತದೆ. ವಾದಿ ಮತ್ತು ಪ್ರತಿವಾದಿಗಳ ಜಮೀನಿನ ಪಕ್ಕದಲ್ಲಿ ನನ್ನ ಸದರಿ ಜಮೀನು ಇರುವುದಿಲ್ಲ ಎಂದರೆ ಸಾಕ್ಷಿಯು ಅವರ ಜಮೀನಾದ 2-3 ಜಮೀನುಗಳ ನಂತರ ನನ್ನ ಜಮೀನು ಇದೆ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿಗಳ ಜಮೀನಿಗೂ ನನ್ನ

ಜಮೀನಿಗೂ ತುಂಬ ದೂರ ಇರುತ್ತದೆ ಎಂದರೆ ಸಾಕ್ಷಿಯು ಇಲ್ಲ 2 ಜಮೀನುಗಳಾದ ನಂತರ ನನ್ನ ಜಮೀನು ಇದೆ ಎಂದು ನುಡಿಯುತ್ತಾರೆ. ವಾದಿ ಮತ್ತು ಪ್ರತಿವಾದಿಗಳ ಜಮೀನಿನಲ್ಲಿ ಏನು ಬೆಳೆಯುತ್ತಾರೆ ಮತ್ತು ಅದು ಹೇಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಗಳ ಕುಟುಂಬದ ಬಗ್ಗೆ ಮತ್ತು ಅವರ ಮೂಲ ಪುರುಷರ ಬಗ್ಗೆ ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರಗಳು ಗೊತ್ತಿಲ್ಲದೇ ಇದ್ದರೂ ಸಹ ವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಹೇಳಿರುವ ವಿಚಾರಗಳು ಸುಳ್ಳು ಎಂದರೆ ಸರಿಯಲ್ಲ. ಯಾವುದೇ ದಾರಿ ಅಸ್ತಿತ್ವದಲ್ಲಿ ಇಲ್ಲದೇ ಇದ್ದರು ಸಹ ವಾದಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಳೆದ ವರ್ಷ 1 ಮತ್ತು 2ನೇ ಪ್ರತಿವಾದಿಗಳ ತಾಯಿ ಮೃತಪಟ್ಟಾಗ ಊರ ಒಟ್ಟಿನ ಪಾತ್ರೆಗಳನ್ನು ಅವರ ತಿಥಿ ಕಾರ್ಯಕ್ಕೆ ನಾವು ಕೊಡದ ಸಂದರ್ಭದಲ್ಲಿ ಪ್ರತಿವಾದಿಗೆ ಹಾಗೂ ನನಗೆ ಗಲಾಟೆಯಾಗಿತ್ತು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ